ದಿನಾಂಕಃ **10.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು 1ನೇ ಎದುರುದಾರರ ಪರ ಶ್ರೀ ಡಿಜಿ ಪಿ ವಕೀಲರಿಂದಃ-

ಭೂಸ್ವಾಧೀನಕ್ಕೆ ಒಳಪಟ್ಟಜಮೀನಿನ ನೋಟೀಸ್ ಗಳು ನಮ್ಮ ತಾಯಿಯ ಹೆಸರಿಗೆ ಬಂದಿರುತ್ತದೆ. ಪರಿಹಾರದ ಹಣವನ್ನುನಮ್ಮ ತಾಯಿಯವರಿಗೆ ನೀಡಿರುತ್ತಾರೆ. ಸರ್ವೇ ನಂ.

266/6 ರಲ್ಲಿ 21 ಗುಂಟೆ ಖುಷ್ಕಿ ಜಮೀನು, ಅರ್ಧ ಗುಂಟೆ ಖುಷ್ಕಿ ಜಮೀನು ಅಂದರೆ ಸರಿ. ಅರ್ಜಿ ಸ್ವತ್ತು ಶಿರಾದಿಂದ 12 ಕಿಮೀ ಅಂತರದಲ್ಲಿ ಇತ್ತು ಅಂದರೆ ಸರಿಯಲ್ಲ. ಆ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿ ಸ್ವತ್ತು ಗ್ರಾಮಪಂಚಾಯತಿಗೆ ಸೇರಿದ್ದು ಅಂದರೆ ಸರಿ.

ತಮ್ಮ ಜಮೀನಿನಲ್ಲಿ ಏನು ಬೆಳೆಯುತ್ತಿರಲಿಲ್ಲ ಅಂದರೆ ಸರಿಯಲ್ಲ. ಮಳೆ ಬಂದರೆ ಮಾತ್ರ ತಮಗೆ ಬೆಳೆ ಅಂದರೆ ಸರಿಯಲ್ಲ. ತಮ್ಮ ಜಮೀನಿನ ಪಕ್ಕ ಬೋರ್ ವೆಲ್ ಇದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ತಮ್ಮ ಜಮೀನಿಗೆ ಹೊಂದಿಕೊಂಡಂತೆ ಯಾವುದೇ ರಸ್ತೆಗಳು ಇಲ್ಲ ಅಂದರೆ ಸರಿಯಲ್ಲ. ಆ ಕುರಿತು ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹೈವೇಯಿಂದ ಮೂರುವರೆ ಕಿಮೀ ಅಂತರವಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಹೈವೇಯಿಂದ 200 ಮೀಟರ್ ಅಂತರವಿರುತ್ತದೆ ಎಂದು ನುಡಿಯುತ್ತಾರೆ.

ಭೂಸ್ವಾಧೀನವಾದ ಜಮೀನಿನಿಂದ ವಾರ್ಷಿಕವಾಗಿ 1 ಲಕ್ಷ ಆದಾಯ ಬರುತ್ತಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ತಮ್ಮ ಜಮೀನು 1 ಗುಂಟೆಗೆ 2 ಲಕ್ಷ ಬೆಲೆ ಬಾಳುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

ತಮ್ಮ ಜಮೀನಿನ ಅಕ್ಕ ಪಕ್ಕ ಯಾವುದೇ ಲೇಔಟ್ , ಇಂಡಸ್ಟ್ರೀ ಇಲ್ಲ ಅಂದರೆ ನಮ್ಮ ಊರಿನಿಂದ ಅರ್ಧ ಕಿಮೀ ಅಂತರದಲ್ಲಿ ಕೈಗಾರಿಕ ಪ್ರದೇಶವಿರುತ್ತದೆ. ಆ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಭೂ ಸ್ವಾಧೀನವಾದ ಜಮೀನಿನಲ್ಲಿ ಕಡಿದ ಮರಗಳನ್ನು ಅವರೇ ತೆಗೆದುಕೊಂಡು ಹೋಗಿರುತ್ತಾರೆ. ಹುಣಸೇ ಮರಕ್ಕೆ

40 ವರ್ಷ , ಯರದೆ ಮರವು 20 ವರ್ಷದ್ದು , ಜಾಲಿ ಮರ 10 ವರ್ಷದ್ದು , ಬಾಲದ ಮರ 40 ವರ್ಷದ್ದು ಎಂದು ನಮೂದಿಸಿದ್ದು ಅದಕ್ಕೆ ಪೂರಕವಾದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಅಂದರೆ ಸರಿ. ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ಅಂಶಗಳು ಸುಳ್ಳು ಅಂದರೆ ಸರಿಯಲ್ಲ.

ಪರಿಹಾರದ ಹಣವನ್ನು ಪಡೆಯುವ ಸಮಯದಲ್ಲಿ ನಮ್ಮ ತಕರಾರು ಇದೆ ಎಂದು ತಾವು ಸಲ್ಲಿಸಿಲ್ಲ ಅಂದರೆ ಸರಿ. ಅರ್ಜಿ ಸ್ವತ್ತನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಪಡೆದುಕೊಂಡಿರುವುದು ಅಂದರೆ ಸರಿ. ನಿಪಿ-17 ಶುದ್ದ ಕ್ರಯಪತ್ರವು ಹೈವೇಗೆ ಹೊಂದಿಕೊಂಡಿರುವ ಜಮೀನು ಅಂದರೆ ಸರಿ. 33 ಗುಂಟೆಗೆ ರೂ.13,29,000-00 ಕೊಟ್ಟಿದೆ ಅಂದರೆ ಸರಿ. ನಿಪಿ-18 ಶುದ್ದ ಕ್ರಯಪತ್ರವು ನ್ಯಾಷನಲ್ ಹೈವೇಗೆ ಹೊಂದಿಕೊಂಡಿರುವ ಜಮೀನು ಅಂದರೆ ಸರಿ. 1 ಎಕರೆ 23 ಗುಂಟೆಗೆ ರೂ25,36,000-00 ಕ್ರಯವಾಗಿರುತ್ತದೆ ಅಂದರೆ ಸರಿ. ತಾವು ಸಲ್ಲಿಸಿರುವ ಕ್ರಯಪತ್ರಗಳಿಗಿಂತ ಹೆಚ್ಚಾಗಿ ಎಸ್ ಎಲ್ ಎ ಓ ರವರು ಪರಿಹಾರವನ್ನು ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಿಪಿ-20 ಎಲ್ ಎ ಸಿ 152-18 ಕುಚ್ಚಂಗಿ ಗ್ರಾಮಕ್ಕೆ ಸೇರಿದ್ದು ಅಂದರೆ

ಸರಿ. ಕುಚ್ಚಂಗಿ ಗ್ರಾಮ ತುಮಕೂರಿಗೆ ಸೇರಿದ್ದು ಅಂದರೆ ಸರಿ. ಸದರಿ ನೋಟಿಫಿಕೇಷನ್ ಬೇರೆ ಅಂದರೆ ಸರಿ. ತಮ್ಮ ಜಮೀನು ಶಿರಾ ತಾಲ್ಲೂಕು, ಕಸಬಾ ಹೋಬಳಿಗೆ ಸೇರಿದ್ದು ಅಂದರೆ ಸರಿ.

ತಮಗೆ ಸೂಕ್ತವಾದ ಮತ್ತು ವೈಜ್ಞಾನಿಕವಾದ ಬೆಲೆಯನ್ನು ನಿಗದಿಪಡಿಸಿದ್ದರು ಸಹ ಸುಳ್ಳು ಪ್ರಮಾಣ ಪತ್ರವನ್ನು ಮತ್ತು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು